**ಹೆಂಡತಿ:** ನೀವು ನನಗೆ ಚಿನ್ನದ ಸರ ಮಾಡಿಸಿ ಹಾಕಿದರೆ, ಏಳೇಳು ಜನ್ಮಕ್ಕೂ ನಾನೇ ನಿಮ್ಮ ಹೆಂಡತಿಯಾಗ್ತೀನಿ.
**ಗಂಡ:** ಚಿನ್ನದ ಸರದ ಜೊತೆಗೆ ಎರಡು ಬಳೆ, ಒಂದು ಡಾಬುನು ಮಾಡ್ಸಿ ಹಾಕ್ತೀನಿ ಕಣೇ. ಆದ್ರೆ ಇದು ಈ ಜನ್ಮಕ್ಕೆ ನಿಲ್ಲಿ ಬಿಡೋಣ.

**ರಮೇಶ:** ಇವತ್ತು ನನ್ನ ಗರ್ಲ್‌ಫ್ರೆಂಡ್ ಬರ್ತ್‌ಡೇ, ಅವಳಿಗೆ ಏನು ಕೊಡ್ಲಿ?
**ಸುರೇಶ:** ನೋಡೋಕೆ ಹೇಗಿದ್ದಾಳೆ?
**ರಮೇಶ:** ತುಂಬಾ ಚೆನ್ನಾಗಿದ್ದಾಳೆ.
**ಸುರೇಶ:** ಹಾಗಿದ್ರೆ ನನ್ನ ನಂಬರ್ ಕೊಡು.

ಕೋಮಾದಿಂದ ಎದ್ದ ನಂತರ...
**ರೋಗಿ:** ಡಾಕ್ಟ್ರೆ ನನಗೇನಾಗಿತ್ತು?
**ಡಾಕ್ಟರ್:** ಏನಿಲ್ಲ ಸ್ವಲ್ಪ ಹೊತ್ತು ನಿಮ್ಮ ಇಂಟರ್‌ನೆಟ್ ಬಂದ್ ಆಗಿತ್ತು. ಆ ಶಾಕ್‌ಗೆ ಕೋಮಾಗೆ ಹೋಗಿದ್ರಿ ಅಷ್ಟೇ.

**ಜ್ಯೋತಿಷಿ:** ನಿನ್ನ ಎಡ ತೊಡೆಯ ಮೇಲೆ ಮಚ್ಚೆ ಇದೆ. ಮುಂದೊಂದು ದಿನ ನೀನು ಮಹಾಶೂರ ಮಹಾವೀರ ಆಗ್ತೀಯ.
**ಗುಂಡ:** ಸ್ವಾಮಿ ಇದು ಮಚ್ಚೆ ಅಲ್ಲ, ನನ್ನ ಲವರ್ ಗಂಡ ಬರೆ ಹಾಕಿದ್ದು.


**ಟೀಚರ್:** ಈಜಿಪ್ಟ್ ಮಮ್ಮಿಗೂ ಇಂಡಿಯನ್ ಮಮ್ಮಿಗೂ ಏನು ವ್ಯತ್ಯಾಸ ಹೇಳು ಗುಂಡ?
**ಗುಂಡ:** ಈಜಿಪ್ಟ್ ಮಮ್ಮಿ ನೋಡಿ ಮಕ್ಕಳು ಭಯಪಡ್ತಾರೆ. ಇಂಡಿಯನ್ ಮಮ್ಮಿ ನೋಡಿ ಡ್ಯಾಡಿ ಭಯಪಡ್ತಾರೆ ಟೀಚರ್!

**ಭಿಕ್ಷುಕ:** ಏನಾದರೂ ತಿನ್ನಕ್ಕೆ ಕೊಡಿ ಸರ್, ನಿಮಗೆ ಸ್ವರ್ಗ ಸಿಗುತ್ತೆ.
**ಗುಂಡ:** ನಿನಗೆ ಬೆಂಗಳೂರ್ ಕೊಡ್ತೀನಿ ತಗೋ.
**ಭಿಕ್ಷುಕ:** ತಿನ್ನಕ್ಕೆ ಏನಾದರೂ ಕೊಡಿ ಅಂದರೆ, ಬೆಂಗಳೂರ್ ಕೊಡತಾರಂತೆ, ಬೆಂಗಳೂರ್ ಏನ್ ನಿಮ್ದಾ?
**ಗುಂಡ:** ಸ್ವರ್ಗ ಸಿಗುತ್ತೆ ಅಂತಿದ್ದೀಯಲ್ಲ ಸ್ವರ್ಗ ನಿಂದಾ? ನಿಮ್ಮಪ್ಪಂದಾ?





**ಪತಿ:** ನಿನಗೆ ಮಾಂಸಾಹಾರ ಇಷ್ಟನಾ ಶಾಖಾಹಾರ ಇಷ್ಟನಾ?
**ಪತ್ನಿ:** ನನಗೆ ಮುತ್ತಿನಹಾರ, ವಜ್ರದಹಾರ, ರತ್ನದ ಹಾರ ಇಷ್ಟ.

**ಬಂಟಿ:** ಅಮ್ಮಾ ನಿನಗೆ ಇಷ್ಟ ಎಂದು ಕಿತ್ತಳೆ ಹಣ್ಣನ್ನು ತಂದಿದ್ದೇನೆ ನೋಡು.
**ಅಮ್ಮ:** ನನಗೆ ಕಿತ್ತಳೆ ಹಣ್ಣು ಇಷ್ಟ ಎಂದು ನಿನಗೆ ನಾನು ಯಾವತ್ತೂ ಹೇಳೇ ಇಲ್ಲವಲ್ಲ.
**ಬಂಟಿ:** ಮತ್ತೆ ನಿನಗೆ ಕೋಪ ಬಂದಾಗಲೆಲ್ಲ ಚರ್ಮ ಸುಲಿಯುತ್ತೇನೆ ಅಂತ ಬೈಯ್ತಾ ಇರ್ತಿಯಲ್ಲ. ಹಾಗಾಗಿ ಕಿತ್ತಳೆ ಚರ್ಮ ಸುಲಿಯುವುದು ನಿನಗೆ ಇಷ್ಟ ಅಂತ ಅಂದುಕೊಂಡೆ.




**ಚಿಂಟು:** ಅಪ್ಪ, ಅಪ್ಪ... ಮಹಿಳೆಯರಿಗೆ ಮಾತೆ ಅನ್ನುತ್ತಾರಲ್ಲ ಯಾಕೆ?
**ಅಪ್ಪ:** ಏಕೆಂದರೆ ಅವರು ಜಾಸ್ತಿ ಮಾತನಾಡುತ್ತಾರಲ್ಲ ಅದಕ್ಕೆ.
**ಚಿಂಟು:** ಓಹ್ ಈಗ ಗೊತ್ತಾಯ್ತು ಅಪ್ಪ. ಹಾಗಾದ್ರೆ, ಪುರುಷರಿಗೆ ಪಿತ್ತ ಜಾಸ್ತಿ ಇರುವ ಕಾರಣಕ್ಕೆ ಪಿತ ಎನ್ನುತ್ತಾರೆ ಅಲ್ವಾ?

**ಗುಂಡ:** ದೇವರೆ ಈ ಸೊಳ್ಳೆಗಳನ್ನು ಏಕೆ ಸೃಷ್ಟಿಸಿದೆ?
**ದೇವರು:** ಮನುಷ್ಯ ಮೈಮರೆತು ಮಲಗಬಾರದೆಂದು ಮಗು.




ಆಷಾಢಕ್ಕೆ ಗುಂಡನ ಹೆಂಡತಿ ತವರಿಗೆ ಹೋಗಿದ್ದಳು. ಗುಂಡನಿಗೆ ಸಾಂಬಾರು ಮಾಡುವ ಬಗ್ಗೆ ಫೋನಿನಲ್ಲಿ ಸಲಹೆಗಳನ್ನು ಕೊಡುತ್ತಿದ್ದಳು. ಎಲ್ಲಾ ಮುಗಿದ ಮೇಲೆ ಗುಂಡ ಮತ್ತೆ ಫೋನು ಮಾಡಿ, 'ಸಾಂಬಾರಿಗೆ ತಲೆಕೂದಲು ಹಾಕುವುದು ಯಾವಾಗ' ಎಂದು ಕೇಳಿದ.

**ರಾಮು:** ಚಳಿಗಾಲದಲ್ಲಿ ಐಸ್‌ಕ್ರೀಂ ತಿಂದರೆ ಏನಾಗುತ್ತದೆ?
**ಶಾಮು:** ಐಸ್ ಕ್ರೀಂ ಕಪ್ ಖಾಲಿಯಾಗುತ್ತೆ!

ಸಂಗ್ರಹ: **ಶರದ ಕುಲಕರ್ಣಿ, ಬೀದರ್**